ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರಃ 1783-2013

ಚಾಸಾ ಃ 3 ಪ್ರಾಸಾ ಃ 3

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು

ದಿನಾಂಕಃ 02-07-2015

ವಾಗ್ಮೂಲದವರ ಹೆಸರು ಃ ರಾಘವೇಂದ್ರ
ತಂದೆ ಹೆಸರು ಃ ಸದಾಶಿವ ಶೇರಿಗಾರ್
ವಯಸ್ಸು ಃ 34 ವರ್ಷ
ಉದ್ಯೋಗ ಃ ವ್ಯಾಪಾರ
ವಾಸಸ್ಥಳ ಃ ಕೋಟೇಶ್ವರ

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದಃ

ನ್ಯಾಯಾಲಯದ ಮುಂದೆ ಇದ್ದ ಆರೋಪಿತರನ್ನು ಮತ್ತು ಗೈರು ಹಾಜರಾಗಿದ್ದ ಆರೋಪಿ ಪ್ರಹ್ಲಾದನ ಪರಿಚಯ ಇದೆ. ಚಾ.ಸಾ.1 ನನ್ನ ಅಕ್ಕ, ಚಾ.ಸಾ.2 ನನ್ನ ಅಣ್ಣ.

2. ದಿಃ27-11-2012ರಂದು ರಾತ್ರಿ 12-00ಗಂಟೆ ಸಮಯಕ್ಕೆ ನಮ್ಮ ಮನೆಯ ಅಶೋಕ ಕಟ್ಟೆಯ ಹತ್ತಿರ ನಾನು, ಚಾ.ಸಾ.1 ಮತ್ತು 2ರವರು ದೇವರದ ಪೂಜೆ ಮುಗಿಸಿ ಮನೆಗೆ ಬರುತ್ತಿದ್ದಾಗ ಚಾ.ಸಾ.1ರವರ ಕೈಯಲ್ಲಿ ದೀಪದ ಆರತಿ ಇದ್ದು, ನಾವು ಮನೆಗೆ ಹೋಗುತ್ತಿರುವಾಗ ನಾನು ಸ್ವಲ್ಪ ಹಿಂದೆ ಇದ್ದು, ಚಾ.ಸಾ.1 ಮತ್ತು 2ರವರು ಮುಂದೆ ಇದ್ದು, ಒಬ್ಬ ವ್ಯಕ್ತಿ ಚಾ.ಸಾ.1ರವರ ಕುತ್ತಿಗೆಯಿಂದ ಮಾಂಗಲ್ಯದ ಸರ ಮತ್ತು ಒಂದು ಹವಳದ ಸರವನ್ನು ಕಿತ್ತುಕೊಂಡು ಓಡಿ ಹೋಗಿರುತ್ತಾರೆ. ಆಗ ಚಾ.ಸಾ.1ರವರು ಬೊಬ್ಬೆ ಹೊಡೆದಾಗ ಚಾ.ಸಾ.2ರವರು ಆತನನ್ನು ಬೆನ್ನಟ್ಟಿಕೊಂಡು ಓಡಿ ಹೋಗಿರುತ್ತಾರೆ. ಆದರೆ ಆತ ಸಿಕ್ಕಿರುವುದಿಲ್ಲ. ನಂತರ ಚಾ.ಸಾ.1ರವರು ಪೋಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತಾರೆ.

3. ಸ್ವಲ್ಪ ದಿನಗಳ ನಂತರ ಪೋಲೀಸರು ನಮ್ಮನ್ನು ಠಾಣೆಗೆ ಕರೆಸಿ ಆರೋಪಿ ಪ್ರಶಾಂತ ಮತ್ತು ಪ್ರಹ್ಲಾದನನ್ನು ಪೋಲೀಸ್ ಠಾಣೆಯಲ್ಲಿ ನಮಗೆ ತೋರಿಸಿ ನನ್ನ ಅಕ್ಕನ ಕುತ್ತಿಗೆಯಿಂದ ಕಸಿದುಕೊಂಡು ಹೋದ ಕರಿಮಣಿ ಸರ ಮತ್ತು ಹವಳದ ಸರವನ್ನು ಕೂಡ ತೋರಿಸಿರುತ್ತಾರೆ. ಅದನ್ನು ನಾವು ಗುರುತಿಸಿರುತ್ತೇವೆ. ಸದ್ರಿ ಚಿನ್ನವನ್ನು ಅಲ್ಲಿದ್ದ

ಆರೋಪಿತರೇ ಕಿತ್ತುಕೊಂಡು ಹೋಗಿದ್ದು ಎಂದು ಪೋಲೀಸರು ಹೇಳಿರುತ್ತಾರೆ. ಸದ್ರಿ ಚಿನ್ನವನ್ನು ಮೂತ್ತೂಟ್ ಫೈನಾನ್ಸ್ ಕಂಪೆನಿಯಲ್ಲಿ ಅಡವಿಟ್ಟಿರುವ ಬಗ್ಗೆ ತಿಳಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ಗುರುತಿಸಿರುತ್ತಾರೆ. 1ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತ ಈ ದಿನ ಗೈರು ಹಾಜರಾಗಿದ್ದು ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲವೆಂದು ಆರೋಪಿತರ ಪರ ವಕೀಲರು ನುಡಿದಿರುತ್ತಾರೆ. ನಾನು ಈ ಬಗ್ಗೆ ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಮತ್ತು 2ನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.